ಶ್ರೀ ಹೆಚ್. ನಾಗಪ್ಪ :— ಸಭಾಧ್ಯಕ್ಷರೆ, ಇತ್ತೀಚೆಗೆ ಅವರೇನಾದರೂ ರೆಪ್ರಸೆಂಟೇಷನ್ ಕೊಟ್ಟಿರುವುದು ಇದ್ದರೆ, ನಾನು ಹುಡುಕಿಸಿ ಆ ಕಡತವನ್ನು ತೆಗೆಸುತ್ತೇನೆ. ಇಲ್ಲದಿದ್ದರೆ, ಅದನ್ನು ಅಭಿವೃದ್ಧಿಪಡಿಸುವುದಕ್ಕೆ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

ಸ್ಟೇಟ್ ಅಗ್ರೋಕಾರ್ನ್ ಪ್ರಾಡಕ್ಟ್ಸ್, ಲಿ. ಇದರಲ್ಲಿ ಭ್ರಷ್ಟಾಚಾರ.

56(96) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರ ಸ್ವಾಮ್ಯದ ಕರ್ನಾಟಕ ಸ್ಟೇಟ್ ಅಗ್ರೋಕಾರನ್ ಪ್ರಾಡಕ್ಟ್ಸ್, ಸಂಸ್ಥೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಪ್ರಕರಣವು ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಯಾವ ದಿನಾಂಕದಿಂದ ಬಂದಿದೆ, ಈ ಪ್ರಕರಣವನ್ನು ಸಿ.ಓಡಿ ತನಿಖೆಗೆ ಒಪ್ಪಿಸಲಾಗಿದೆಯೇ ಸಿ.ಓಡಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ (ಸಲ್ಲಿಸಿದ್ದರೇ ವರದಿಯ ಪೂರ್ಣ ವಿವರ ನೀಡುವುದು.)

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :—

ಅ) ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಡಾ: ಎಂ.ಎಸ್. ಪಾರ್ಥಸಾರಥಿ ಮೇಲೆ ಭ್ರಷ್ಟಾಚಾರ ಅಕ್ರಮ ವ್ಯವಹಾರ ಮತ್ತು ಆಡಳಿತ ಲೋಪಗಳ ಬಗ್ಗೆ ದೂರುಗಳು ಸರ್ಕಾರದಲ್ಲಿ ಸ್ವೀಕೃತವಾಗಿವೆ.

ಆ) ಈ ಬಗ್ಗೆ ದೂರುಗಳನ್ನು ಜುಲೈ 1998ರಲ್ಲಿ ಸ್ವೀಕರಿಸಿದ್ದು, ಹಿಂದಿನ ವ್ಯವಸ್ಥಾಪಕ ನಿರ್ದೇಶಕರನ್ನು ವಿಚಾರಣೆ ಬಾಕಿ ಇಟ್ಟು ಅಮಾನತ್ತಿನಲ್ಲಿಡಲಾಗಿದೆ, ನಂತರ ಪ್ರಕರಣವನ್ನು ತನಿಖೆ ನಡೆಸಲು ಸಿ.ಓ.ಡಿ.ಗೆ ಒಪ್ಪಿಸಲಾಗಿದೆ. ಸಿ.ಓ.ಡಿಯಿಂದ ತನಿಖಾ ವರದಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಸಭಾಧ್ಯಕ್ಷರೆ, ಉತ್ತರದಲ್ಲಿ ಜುಲೈ 98ರಂದು ದೂರುಗಳನ್ನು ಸ್ವೀಕರಿಸಿದ್ದು ಹಿಂದಿನ ವ್ಯವಸ್ಥಾಪಕ ನಿರ್ದೇಶಕರ ವಿಚಾರಣೆ ಬಾಕಿ ಇದ್ದು, ಅಮಾನತ್ತಿನಲ್ಲಿಡಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ನಾನು ಕೃಷಿ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ನೀವೂ ಕೂಡ ಇಲ್ಲಿ ಅನೇಕ ಹಗರಣಗಳನ್ನು ಪ್ರಸ್ತಾಪ ಮಾಡಿದ್ದೀರಿ, ಸರ್ಕಾರದ ವ್ಯವಸ್ಥೆಯನ್ನು ಸರಿಮಾಡಬೇಕೆಂದು ಪ್ರಯತ್ನಿಸಿದ್ದೀರಿ. ಇವತ್ತು ನಿಮ್ಮ ಮುಂದೆ ಸುಮಾರು 1997-98ನೇ ಇಸವಿನಲ್ಲಿ ನಾಲ್ಕೂವರೆ ಕೋಟಿ ರೂಪಾಯಿಗಳ ನಷ್ಟ ಅನುಭವಿಸಿದೆ ಎನ್ನುವ ದೂರು ಬಂದಿದೆ. ಏನೇನು ಎಂದರೆ

ಕಚ್ಚಾವಸ್ತುಗಳ ಖರೀದಿಯಲ್ಲಿ ಅವ್ಯವಹಾರ, ಸಾಲ ಮಾಡಿ ಬಂಡವಾಳ ಹಾಕಿ ದುಡಿಯದೆ ನಿಲ್ಲಿಸಿರುವ ಯಂತ್ರಗಳ ಬಗ್ಗೆ, ನೌಕರರ ನೇಮಕಾತಿಯಲ್ಲಿ ಅವ್ಯವಹಾರ, ನೌಕರರಿಗೆ ಬಡ್ತಿಯನ್ನು ನೀಡುವಲ್ಲಿ ತಾರತಮ್ಯ, ನಿಯಮಾವಳಿಗಳನ್ನೇ ಉಲ್ಲಂಘಿಸಿರುವುದು, ಕಾನೂನಿಗೆ ವಿರುದ್ಧವಾಗಿ ಹುದ್ದೆಗಳನ್ನು ಸೃಷ್ಟಿಸಿರುವುದು, ನೌಕರರ ನೇಮಕಾತಿಗೆ ಆಡಳಿತ ಮಂಡಳಿ ಅನುಮತಿ ನೀಡದೆ ನಿರಾಕರಿಸಿದಾಗ, ಅನುಮೋದನೆ ನೀಡಲಾಗಿದೆ ಎಂದು ದಾಖಲಾತಿಗಳನ್ನು ತಿದ್ದಲಾಗಿರುವುದು, ಕಚ್ಚಾವಸ್ತುಗಳ ಸಾಗಾಣಿಕೆಗೆ ಕಾನೂನುಬಾಹಿರವಾಗಿ ಕಮಿಷನ್ ಅನ್ನು ಬದಲಾವಣೆ ಮಾಡಿ ತೆಗೆದುಕೊಂಡಿರುವುದು, ಮೆಕ್ಕೆಜೋಳವನ್ನು 550 ರೂ. ಕೊಂಡು ಅಧಿಕೃತವಾಗಿ 440 ರೂ. ಎಂದು ದಾಖಲಿಸಿರುವುದು, ಟೆಂಡರ್ ಕರೆಯದೆ ಬೇಕಾಬಿಟ್ಟಿ ಮಾಡಿರುವುದು. ಇವತ್ತು ಇದನ್ನು 1998ರಲ್ಲಿ ಸಿಓಡಿ ತನಿಖೆಗೆ ಕೊಟ್ಟಿದ್ದೀರಿ ಈ ಆಯೋಗಗಳಿಗೆ ಮೂರು ತಿಂಗಳಲ್ಲಿ ವರದಿಯನ್ನು ಸಲ್ಲಿಸಬೇಕೆನ್ನುತ್ತಾರೆ. ಇವೆಲ್ಲಾ ನಿರ್ದಿಷ್ಟವಾದ ಅಪಾದನೆಗಳು, ಒಂದು ನಿರ್ದಿಷ್ಟವಾದ ಅವಧಿಯೊಳಗೆ ವರದಿಯನ್ನು ಕೊಡಬೇಕೆಂದು ನೀವು ಏತಕ್ಕೆ ತಿಳಿಸುವುದಿಲ್ಲ? ಅಥವಾ ಅವರು ನಿವೃತ್ತಿಯಾಗಬೇಕು ಅಥವಾ ಈ ಪ್ರಪಂಚದಿಂದಲೇ ಅವರು ಹೋಗಬೇಕು ಆವಾಗ ನೀವು ವರದಿಯನ್ನು ಕೊಡುತ್ತೀರಾ? ತನಿಖೆಯ ಬಗ್ಗೆ ಕೂಡ ಜನತೆಗೆ ವಿಶ್ವಾಸ ಬರಬೇಕು, ಸರ್ಕಾರಕ್ಕೆ ಅಪರಾಧಿಗಳನ್ನು ಶಿಕ್ಷಿಸುವ ಬಗ್ಗೆ ಒಂದು ದೃಢ ನಿಲುವು ಇರಬೇಕು, ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳಬಯಸುತ್ತೀರಿ?

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಈ ಸಂಸ್ಥೆಯ ಹಿತದೃಷ್ಟಿಯಿಂದ ಸಾರ್ವಜನಿಕರ ಹಿತವನ್ನು ಕಾಪಾಡುವುದಕ್ಕೆ ಮಾನ್ಯ ಸದಸ್ಯರು ಏನು ಹೇಳಿದರೂ ಕೂಡ ಸರ್ಕಾರ ಈ ನಿಮಿಷದಲ್ಲೇ ಅದಕ್ಕೆ ಒಪ್ಪಿಕೊಳ್ಳುತ್ತದೆ. ನೀವು ಹೇಳಿದ್ದನ್ನೆಲ್ಲಾ ಇಲ್ಲೇ ನಾನು ಒಪ್ಪಿದ್ದೇನೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇವತ್ತೆ ಸಂಬಂಧಪಟ್ಟವರಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸೂಚಿಸುತ್ತೇನೆ.

ರಾಜ್ಯದ ಪ್ರತಿ ಹಳ್ಳಿಗಳಿಗೂ ಸ್ಮಶಾನ ಭೂಮಿ ಮಂಜೂರಾತಿ.

57(328) ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದ ಪ್ರತಿ ಹಳ್ಳಿಗಳಲ್ಲೂ ಸ್ಮಶಾನಕ್ಕಾಗಿ ಸ್ಥಳವನ್ನು ಕಾಯ್ದಿರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಸ್ಮಶಾನಕ್ಕಾಗಿ ಸ್ಥಳ ಇಲ್ಲದ ಹಳ್ಳಿಗಳ ಸಂಖ್ಯೆ ಎಷ್ಟು?

ಇ) ಸ್ಮಶಾನಕ್ಕಾಗಿ ಸ್ಥಳವಿಲ್ಲದೇ ಶವಗಳನ್ನು ಹೂಳಲು ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?